ರಾಜ್ಯವಲಯದಿಂದ ಸಾಧನ ಸಾಮಗ್ರಿಗಳ ಸರಬರಾಜಿಗೆ ಆಯ್ಕೆ ಮಾಡಿದ ಪ್ರೌಢಶಾಲೆಗಳ ಪಟ್ಟಿ

ಕ್ರಮ ಸಂಖ್ಯೆ	ಶಾಲೆಗಳ ಹೆಸರು	ತಾಲ್ಲೂಕಿನ ಹೆಸರು
1	ಸರ್ಕಾರಿ ಪ್ರೌಢಶಾಲೆ, ಜಾಲಿಗೆ	ದೇವನಹಳ್ಳಿ
2	ಸರ್ಕಾರಿ ಪ್ರೌಢಶಾಲೆ, ಹಲಸೂರು	ಕನಕಪುರ
3	ಸರ್ಕಾರಿ ಪ್ರೌಢಶಾಲೆ, (ತೆಲಗು), ದೊಡ್ಡಬಳ್ಳಾಪುರ	ದೊಡ್ಡಬಳ್ಳಾಪುರ
4	ಸರ್ಕಾರಿ ಪ್ರೌಢಶಾಲೆ, (ಬಾಲಕರ) ಹೊಸಕೋಟೆ	ಹೊಸಕೋಟೆ
5	ಸರ್ಕಾರಿ ಪ್ರೌಢಶಾಲೆ, ಚಿಕ್ಕೆರೆ	ಚನ್ನಪಟ್ಟಣ
6	ಸರ್ಕಾರಿ ಪ್ರೌಢಶಾಲೆ, ಬಾಚೇನಹಳ್ಳಿ	ಮಾಗಡಿ
7	ಸರ್ಕಾರಿ ಪ್ರೌಢಶಾಲೆ, ಸೋಲದೇವನಹಳ್ಳಿ	ನೆಲಮಂಗಲ
8	ಸರ್ಕಾರಿ ಪ್ರೌಢಶಾಲೆ, ಕೈಲಾಂಚ	ರಾಮನಗರ

ದೊಡ್ಡಬಳ್ಳಾಪುರ ಸರ್ಕಾರಿ ಜ್ಯೂನಿಯರ್ ಕಾಲೇಜಿನಲ್ಲಿ ಹೆಚ್ಚುವರಿ ಕೊಠಡಿಗಳ ನಿರ್ಮಾಣ

2570 (2986) ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದೊಡ್ಡಬಳ್ಳಾಪುರ ಸರ್ಕಾರಿ ಜ್ಯೂನಿಯರ್ ಕಾಲೇಜಿನಲ್ಲಿ ಬೋಧನಾ ಕೊಠಡಿಗಳ ಕೊರತೆಯಿದ್ದು ತರಗತಿಗಳನ್ನು ಬೆಳ್ಳಿಗ್ಗೆ 8.30ರಿಂದ 10.30, 10.30 ರಿಂದ 12.00 ಮತ್ತು ಮಧ್ಯಾಹ್ನ 12.00 ರಿಂದ 3.00 ಗಂಟೆಯವರೆಗೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಕಟ್ಟಡ ಕಟ್ಟಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಬಂದಿದೆ. ದೊಡ್ಡಬಳ್ಳಾಪುರ ಸರ್ಕಾರಿ ಪ್ರೌಢಶಾಲಾ ಕಟ್ಟಡದಲ್ಲಿಯೇ ಸರ್ಕಾರಿ ಪದವಿ ಪೂರ್ವ ಕಾಲೇಜು ನಡೆಯುತ್ತಿದೆ. ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗಿರುವುದರಿಂದ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜು ಪಾಳಿ ಪದ್ಧತಿಯಲ್ಲಿ ನಡೆಯುತ್ತಿದೆ.

ಅ) ಹೆಚ್ಚುವರಿ ಕೊಠಡಿಗಳು ನಿರ್ಮಾಣದ ಬಗ್ಗೆ ಪರಿಶೀಲಿಸಲಾಗುವುದು.

ದೊಡ್ಡಬಳ್ಳಾಪುರ ತಾಲ್ಲೂಕಿನ ಬೆಳವಂಗಲ ಜ್ಯೂನಿಯರ್ ಕಾಲೇಜಿನ ಅವ್ಯವಸ್ಥೆ

2571(2987) ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದೊಡ್ಡಬಳ್ಳಾಪುರ ತಾಲ್ಲೂಕಿನ ಬೆಳವಂಗಲ ಜ್ಯೂನಿಯರ್ ಕಾಲೇಜಿನಲ್ಲಿ ಶಾಲಾ ಕೊಠಡಿಗಳು ಸಾಕಾಗದೆ ಮರಗಳ ಕೆಳಗೆ ತರಗತಿಗಳನ್ನು ನಡೆಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇರುವ ಕೊಠಡಿಗಳಲ್ಲಿ ಸರಿಯಾದ ಪೀಠೋಪಕರಣಗಳಿಲ್ಲದೆ ವಿದ್ಯಾರ್ಥಿಗಳು ನೆಲದ ಮೇಲೆ ಕುಳಿತು ತರಗತಿಗಳು ನಡೆಯುತ್ತಿರುವುದರ ಬಗ್ಗೆ ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಬೆಲವಂಗಲದ ಸರ್ಕಾರಿ ಸಂಯಕ್ತ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಾಗಿರುವುದರಿಂದ ಮಳೆಗಾಲದಲ್ಲಿ ಪಿ.ಯುಸಿ ತರಗತಿಗಳನ್ನು ಬೆಳ್ಳಿಗ್ಗೆ 8.30ರಿಂದ 12.000 ರವರೆಗೆ ನಂತರ ಪ್ರೌಢಶಾಲಾ ತರಗತಿಗಳು ಪಾಳಿ ಪದ್ಧತಿಯಲ್ಲಿ ನಡೆಯುತ್ತಿವೆ. ಪ್ರೌಢಶಾಲೆ ಪ್ರಾರಂಭವಾದ ನಂತರ ಕೊಠಡಿಗಳ ಕೊರತೆಯಿಂದ ಪದವಿ ಪೂರ್ವ ಕಾಲೇಜಿನ ಕೊನೆಯ ಒಂದು ಅವಧಿ ಮಾತ್ರ ಸಾಂಸ್ಕೃತಿಕ ಸೆಮಿನಾರ್ ಮತ್ತು ಸಾಮೂಹಿಕ ಅಧ್ಯಯನದ ತರಗತಿಗಳು ಶಾಲಾ ಆವರಣದ ವನದಲ್ಲಿ ಮರದ ಕೆಳಗೆ ನಡೆಯುತ್ತಿದೆ.

ಆ) ಹಾಲಿ ವರ್ಷದಲ್ಲಿ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲು ಪರಿಶೀಲಿಸಲಾಗುವುದು ಮತ್ತು ಪೀಠೋಪಕರಣ ಒದಗಿಸಲು ಕ್ರಮಕ್ಕೆಗೊಳ್ಳಲಾಗುವುದು.

ತುರುವೇಕೆರೆ ತಾಲ್ಲೂಕಿನಲ್ಲಿರುವ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರತಕ್ಕ ಹುದ್ದೆಗಳ ಭರ್ತಿ

2572 (3332) ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ.